ಬೇಕಾಗುತ್ತದೆ. ತಮಗೆ ಗೊತ್ತಿದೆ , ಇಲ್ಲಿ ಸಿನಾನಿಮಸ್ ಕಮಿಟಿ ಎಂದು ಇದೆ. ಸಿನಾನಿಮಸ್ ಕಮಿಟಿಯಲ್ಲಿ ಸಾಕಷ್ಟು ಮೆಂಬರ್ಸ್‌ಗಳು ಇದ್ದಾರೆ. ಅಲ್ಲಿ ನಾವು ಚರ್ಚೆ ಮಾಡಿ ನಿಮ್ಮ ಸಲಹೆಗಳನ್ನು ಕರ್ನಾಟಕ ಸರ್ಕಾರದಿಂದ ಕೇಂದ್ರ ಸರ್ಕಾರಕ್ಕೆ ಕಳುಹಿಸುವಂಥ ಒಂದು ಸಂದರ್ಭ ಇದೆ. ಕರ್ನಾಟಕ ಸರ್ಕಾರ ಈ ಕಮಿಟಿಗೆ ರೆಕಮೆಂಡ್ ಮಾಡಬಹುದು. ಆದರೆ ಇನ್‌ಕ್ಲೂಡ್ ಮಾಡುವ ಪವರ್ಸ್ ನಮಗೆ ಇಲ್ಲ ಎಂದು ಹೇಳಬಯಸುತ್ತೇನೆ. ನಾಳೆ 28ನೇ ತಾರೀಖಿಗೆ ಮೀಟಿಂಗನ್ನು ಇಟ್ಟುಕೊಂಡಿದ್ದೇವೆ. ಆಗ ನಾವು ಇದನ್ನು ಕನ್‌ಸಿಡರ್ ಮಾಡುತ್ತೇವೆ ಎಂದು ಹೇಳಬಯಸುತ್ತೇನೆ. ಅದೇ ಪ್ರಕಾರ ನಮ್ಮ ಮಾನ್ಯ ಸದಸ್ಯರಾದ ಚಿಕ್ಕಮಾದು ಅವರು ಹೇಳಿದರು ಏನೆಂದರೆ, ಐದಾರು ಕಮ್ಯುನಿಟಿಗಳನ್ನು ಎಸ್.ಟಿ ಯಲ್ಲಿ ಸೇರಿಸಿದಾರೆ ಎಂದು, ಮಾನ್ಯ ಅಧ್ಯಕ್ಷರೇ, ಮೊನ್ನೆ ಸೋಷಿಯಲ್ ವೆಲ್‌ಫೇರ್ ಮಿನಿಸ್ಟರ್ಸ್ ಕಾನ್‌ಫರೆನ್ಸ್ ಆಯಿತು. ಅಲ್ಲಿ ಈ ರಿಜರ್‌ವೇಷನನ್ನು ಪಾಪ್ಯುಲೇಷನ್ ಪ್ರಕಾರ ಕೊಡಬೇಕು ಎಂದು ಹೇಳಿದ್ದಾರೆ. 15 ಪರ್ಸೆಂಟ್ ಎಸ್.ಸಿ.ಗಳಿಗೆ ಮತ್ತು ಮೂರು ಪರ್‌ಸೆಂಟ್ ಎಸ್.ಟಿ.ಗಳಿಗೆ ಕೊಡಬೇಕು ಎಂದು ಇದೆ

ವಿಷಯ:- ಪ್ರಕಟಣೆ ಟ್ರೆನಿಡಾಡ್ ಮತ್ತು ಟೊಬಾಗೊ ದೇಶದ ಹೌಸ್ ಆಫ್ ರೆಪ್ರೆಸೆಂಟಿಟೀವ್ಸ್ ಅಧ್ಯಕ್ಷರು ಸಭೆಗೆ ಆಗಮಿಸಿರುವ ಬಗ್ಗೆ.

ಅಧ್ಯಕ್ಷರು:- ಮಾನ್ಯ ಸದಸ್ಯರಲ್ಲಿ ಒಂದು ವಿನಂತಿ. ಟ್ರಿನಿಡಾಡ್ ಮತ್ತು ಟೊಬಾಗೊ ದೇಶದ ಹೌಸ್ ಆಫ್ ರೆಪ್ರೆಸೆಂಟಿಟೀವ್ಸ್‌ನ ಸನ್ಮಾನ್ಯ ಅಧ್ಯಕ್ಷರಾದ ಮಾನ್ಯ ಸೀ ಪಾಲ್‌ಅವರು ಈಗ ಇಲ್ಲಿ ದಯಮಾಡಿಸಿದ್ದಾರೆ. ಸಭೆಯ ಪರವಾಗಿ, ನನ್ನ ಪರನಾಗಿ ಅವರಿಗೆ ಹಾರ್ದಿಕವಾದಂಥ ಶುಭಕಾಮನೆಗಳನ್ನು ವ್ಯಕ್ತಪಡಿಸುತ್ತಿದ್ದೇನೆ ಅವರ ಶ್ರೀಮತಿಯವರು ಭಾರತದ ಸ್ಥಳದವರು. ಅವರು ಪಾಟ್ನಾದವರು. ಅವರ ವಂಶೀಕರು ಪಾಟ್ನಾದವರು. ಅವರು ಕೆಲವು ತಲೆಮಾರಿನ ಕೆಳಗೆ ಅಲ್ಲಿಗೆ ಹೋಗಿ ನೆಲೆಸಿ ಈಗ ಆ ದೇಶದ ಅತ್ಯುನ್ನತ ಸಭೆಯ ಸನ್ಮಾನ್ಯ ಅಧ್ಯಕ್ಷರಾಗಿರತಕ್ಕಂಥದ್ದು ನಮ್ಮ ದೇಶಕ್ಕೆ ಹೆಮ್ಮೆಯ ವಿಷಯ ಎಂದು ಹೇಳಿ ನಾನು ಅವರನ್ನು ವಿಶೇಷವಾಗಿ ಅಭಿನಂದಿಸುತ್ತೇನೆ.

(ಈ ಹಂತದಲ್ಲಿ ಎಲ್ಲಾ ಮಾನ್ಯ ಸದಸ್ಯರುಗಳು ಚಪ್ಪಾಳೆ ತಟ್ಟಿ ಅವರನ್ನು ಸ್ವಾಗತಿಸಿದರು)

(ಸಮಾಜ ಕಲ್ಯಾಣ ಇಲಾಖೆಯ ಬೇಡಿಕೆಗಳ ಮೇಲಿನ ಚರ್ಚೆಗೆ ಉತ್ತರ ಮುಂದುವರಿದುದು)

ಶ್ರೀ ಬಿ.ಶಿವಣ್ಣ:- ಮಾನ್ಯ ಅಧ್ಯಕ್ಷರೇ, ಮೊನ್ನೆ ದೆಹಲಿಯಲ್ಲಿ 21ನೇ ತಾರೀಖಿನ ದಿವಸ ಸೋಷಿಯಲ್ ವೆಲ್‌ಫೇರ್ ಮಿನಿಸ್ಟರ್ಸ್ ಕಾನ್‌ಫರೆನ್ಸ್ ನಡೆಯಿತು. ಆ ಮೀಟಿಂಗ್‌ನಲ್ಲಿ ನಾನು ಸೆಂಟ್ರಲ್ ಮಿನಿಸ್ಟರ್ಸ್‌ಗೆ ರಿಕ್ವೆಸ್ಟ್ ಮಾಡಿದ್ದೇನೆ. ಆಗ ಪಾಪ್ಯುಲೇಷನ್ ಆಧಾರದ ಮೇಲೆ ರಿಸರ್ವೇಷನ್ ಕೊಡಬೇಕು ಎಂದು ಹೇಳಿದ್ದಾಗಿದೆ. ಈಗ ಕರ್ನಾಟಕದಲ್ಲಿ ಅವರು ಹೇಳಿದ ಪ್ರಕಾರ ಕಮ್ಯುನಿಟಿಗಳು ಬೇಡ, ನಾಯಕರು ಎಸ್.ಟಿ ಯಲ್ಲಿ ಬಂದ ಕಾರಣ ನಮ್ಮ ಪಾಪ್ಯುಲೇಷನ್ ಹೆಚ್ಚಾಗುತ್ತದೆ ಮತ್ತು ರಿಸರ್ವೇಷನ್ ಬಹಳ ಕಡಿಮೆ ಇದೆ. ಈ ಪ್ರಕಾರ ರಿಜರ್‌ವೇಷನನ್ನು ನಾವು ಗೌರ್ನಮೆಂಟ್ ಆಫ್ ಇಂಡಿಯಾದವರು ರೈಸ್ ಮಾಡಿದರೆ ಅದನ್ನು ಕೊಡುವುದಕ್ಕೆ ಸಾಧ್ಯ ಇದೆ ಎಂದು ನಮ್ಮ ಸ್ನೇಹಿತರಿಗೆ ಹೇಳ ಬಯಸುತ್ತೇನೆ. ಈ ಪ್ರಕಾರ ಕರ್ನಾಟಕ ಸರ್ಕಾರ ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತದೆ ಎಂದು ಹೇಳುತ್ತೇನೆ. ಅದೇ ಪ್ರಕಾರ ತಳವಾರ ಮತ್ತು ಪರಿವಾರ ಜನಾಂಗದ ಬಗ್ಗೆ ಹೇಳಿದರು, ಇದು ಸಿನಾನಿಮಸ್ ಕಮಿಟಿ ಮುಂದೆ ಬಂದಾಗ ನಾವು ಅದರ ಬಗ್ಗೆ ಒಂದು ಡಿಸಿಷನ್ ತೆಗೆದುಕೊಂಡು ಮತ್ತೆ ಕೇಂದ್ರ ಸರ್ಕಾರಕ್ಕೂ ಕೂಡಾ ಬರೆಯುತ್ತೇವೆ ಎಂದು ಹೇಳಬಯಸುತ್ತೇನೆ. ಹೀಗಾಗಿ ಬ್ಯಾಕ್‌ವರ್ಡ್ ಕ್ಲಾಸ್ ಇಲಾಖೆ ಮತ್ತು ಮೈನಾರಿಟೀಸ್ ಇಲಾಖೆ ಸಾಕಷ್ಟು ಜನರಿಗೆ ಲಾಭ ಮಾಡಿಕೊಡಬೇಕಾಗುತ್ತದೆ ಎಂದು ಹೇಳಬಯಸುತ್ತೇನೆ. ಆಮೇಲೆ ಬಹಳ ಮುಖ್ಯವಾದ ಕಾರ್ಯಕ್ರಮ ಎಂದು ಹೇಳಿದರೆ ವಿಮೆನ್ಸ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್‌ಗೆ ಸೇರಿದ್ದು. ಅದರಲ್ಲಿ ಹೆಚ್ಚಾಗಿ ಏನೆಂದರೆ ಐಸಿಡಿಎಸ್ ಪ್ರೋಗ್ರಾಮ್ ಬಗ್ಗೆ ಬಹಳವಾಗಿ ನಮ್ಮ ಶಾಸಕರು ಹೇಳಿದರು. ಇವತ್ತು ಕರ್ನಾಟಕದಾದ್ಯಂತ ಅಂಗನವಾಡಿ ವರ್ಕರ್ಸ್ ಸ್ಟ್ರೈಕ್